ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ವಿ.ಸ.ಪ 01/ವಿ.ಮಂ.ಅ: 03:2018-19 ದಿನಾಂಕ: 29-06-2018

### : ಸು ತ್ತೋ ಲೆ :

**ವಿಷಯ**: ದಿನಾಂಕ:02-07-2018 ರಿಂದ 12-07-2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನ ಸಮಯದಲ್ಲಿ ಬರುವ ಪ್ರಶ್ನೆಗಳಿಗೆ ನಿಗದಿತ ಅವಧಿಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ.

********

ಕರ್ನಾಟಕ ವಿಧಾನ ಮಂಡಲದ ಅಧಿವೇಶನ ದಿನಾಂಕ: 02-07-2018 ರಿಂದ 12-07-2018 ರವರೆಗೆ ಬೆಂಗಳೂರಿನಲ್ಲಿ ನಡೆಯುತ್ತದೆ. ಈ ದಿಶೆಯಲ್ಲಿ ಪ್ರತಿ ದಿನ ಬರುವ ಚುಕ್ಕೆ ಗುರುತಿನ ಪ್ರಶ್ನೆಗಳು, ಚುಕ್ಕೆ ರಹಿತ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು, ಶೂನ್ಯ ವೇಳೆ ಪ್ರಸ್ತಾಪಗಳು, ವಿವಿಧ ನಿಯಮಗಳ ಅಡಿಯಲ್ಲಿ ಕೇಳಲಾಗುವ ಪ್ರಶ್ನೆಗಳನ್ನು ನಿರಾಕರಿಸದೇ ಕೂಡಲೇ ಸ್ವೀಕರಿಸುವುದು. ಸದರಿ ಪ್ರಶ್ನೆಗಳಿಗೆ ಕೂಡಲೇ ಉತ್ತರವನ್ನು ತಯಾರಿಸಲು ಅನುವಾಗುವಂತೆ ಶಾಖಾಧಿಕಾರಿಗಳು ಮತ್ತು ಶಾಖೆಯ ಅಧೀಕ್ಷಕರು ಅವರವರ ಶಾಖೆಯಲ್ಲಿ ಸಂಜೆ 6-00 ಗಂಟೆಯಿಂದ 8-30 ಗಂಟೆಯವರೆಗೆ ಇರಲು ತಿಳಿಸಿದೆ. ಚುಕ್ಕೆ ಗುರುತಿನ ಮತ್ತು ಚುಕ್ಕೆ ರಹಿತ ಪ್ರಶ್ನೆಗಳಿಗೆ ಹಾಗೂ ಇನ್ನಿತರೆ ಎಲ್ಲಾ ನಿಯಮಗಳ ಗಮನ ಸೆಳೆಯುವ ಸೂಚನಾ ಪ್ರಶ್ನೆಗಳಿಗೆ ಸಂಬಂಧಿಸಿದ ನಿರ್ದೇಶಕರ/ಜಂಟಿ ನಿರ್ದೇಶಕರುಗಳ ಮೂಲಕ ಆಯುಕ್ತರ ಅನುಮೋದನೆಯನ್ನು ಪಡೆದು ಜರೂರಾಗಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವುದು. ಯಾವುದೇ ಪ್ರಶ್ನೆಗಳಿಗೆ / ಸೂಚನೆಗಳಿಗೆ ವಿನಾಕಾರಣ ಕಾಲಾವಕಾಶ ಪಡೆದುಕೊಳ್ಳದಿರಲು ತಿಳಿಸಿದೆ. ತೀರಾ ಅವಶ್ಯಕತೆ ಇರುವ ಸಂದರ್ಭಗಳಲ್ಲಿ ಕಾಲಾವಕಾಶ ಪಡೆದುಕೊಳ್ಳಬೇಕಾದಲ್ಲಿ ಸಂಬಂಧಿಸಿದ ನಿರ್ದೇಶಕರುಗಳ ಅನುಮೋದನೆಯೊಂದಿಗೆ ಕಾಲಾವಕಾಶ ಪಡೆದುಕೊಳ್ಳಲು ತಿಳಿಸಿದೆ. ಹೀಗೆ ಕಾಲಾವಕಾಶ ಪಡೆದುಕೊಂಡ ಪ್ರಶ್ನೆಗಳಿಗೆ ಕಾಲಾವಕಾಶ ಕೋರಿದ ಮಿತಿಯಲ್ಲಿಯೇ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವುದು ಹಾಗೂ ಈ ವಿವರಗಳನ್ನು ಪ್ರತೀ ಶಾಖೆಯಲ್ಲಿ ಪ್ರತ್ಯೇಕ ವಹಿಯಲ್ಲಿ ದಾಖಲಿಸಿ ನಿರ್ವಹಿಸಲು ತಿಳಿಸಿದೆ. ಅಧಿವೇಶನ ಸಮಯದಲ್ಲಿನ ಕಾರ್ಯವಿಧಾನ ಕುರಿತು ಇಲಾಖಾ ಅಂತರ್ಜಾಲ ತಾಣದಲ್ಲಿ (www.schooleducation.kar.nic.in) ಲಭ್ಯವಿರುವ ಈ ಕಛೇರಿ ಸುತ್ತೋಲೆ ಸಂಖ್ಯೆ ವಿ.ಸ.ಪ 01/ಸುತ್ತೋಲೆ 01/2016-17 ದಿನಾಂಕ 01.02.2017 ರಲ್ಲಿರುವ ಅಂಶಗಳನ್ನು ಪಾಲಿಸಲು ತಿಳಿಸಿದೆ.

| | |
|---|---|
| • | ವಿಧಾನ ಸಭೆ / ಪರಿಷತ್ ಪ್ರಶ್ನೆಗಳನ್ನು ಸಂಬಂಧಿಸಿದ ಶಾಖಾಧಿಕಾರಿಗಳು ಹಾಗೂ ಅಧೀಕ್ಷಕರುಗಳು ಯಾವುದೇ ಕಾರಣದಿಂದ ನಿರಾಕರಿಸದೇ ಸ್ವೀಕರಿಸುವುದು. ಒಂದು ವೇಳೆ ನಿರಾಕರಿಸಿದಲ್ಲಿ ಕಡ್ಡಾಯವಾಗಿ ಸಕಾರಣವನ್ನು ಲಿಖಿತ ಮೂಲಕ ದಾಖಲಿಸಿ ಹಿಂದಿರುಗಿಸುವುದು. |
| • | ವಿಧಾನ ಮಂಡಲದ ಅಧಿವೇಶನದ ಸಮಯದಲ್ಲಿ ಬರುವ ಎಲ್ಲಾ ಪ್ರಶ್ನೆಗಳು ಹಾಗೂ ಕಾಗದ ಪತ್ರಗಳನ್ನು ಜೆರಾಕ್ಸ್ ಮಾಡಿಕೊಳ್ಳಲು ಅನುವಾಗುವಂತೆ ಸಂಬಂಧಿಸಿದ ಶಾಖೆಗಳಲ್ಲಿರುವ ಜೆರಾಕ್ಸ್ ಯಂತ್ರಗಳನ್ನು ಸುಸ್ಥಿತಿಯಲ್ಲಿರಿಸಲು ತಿಳಿಸಿದೆ. ಹಾಗೂ ವಿಧಾನ ಸಭೆ / ಪರಿಷತ್ ಶಾಖೆಯ ಸಿಬ್ಬಂದಿಗಳು ಜೆರಾಕ್ಸ್ ಪ್ರತಿಗಳನ್ನು ಕೋರಿದಾಗ ಕಡ್ಡಾಯವಾಗಿ ಅವರಿಗೆ ಅಗತ್ಯ ಸಹಕಾರ ನೀಡುವುದು. |
| • | ವಿಧಾನ ಸಭೆ / ಪರಿಷತ್ ಕಾರ್ಯ ಕಲಾಪಗಳು ನಡೆಯುವ ಅವಧಿಯಲ್ಲಿ ಇಲಾಖಾ ಅಧಿಕಾರಿಗಳು ಮತ್ತು ನೌಕರರು ಯಾವುದೇ ರೀತಿಯ ರಜೆಗಳನ್ನು ಪಡೆಯಬಾರದು. |
| • | ವಿಧಾನ ಸಭೆ / ಪರಿಷತ್ ಕಾರ್ಯಕಲಾಪ ನಡೆಯುವ ವೇಳೇಯಲ್ಲಿ ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳು ಮತ್ತು ಅಧೀಕ್ಷಕರು ಸಂಜೆ 8-30 ಗಂಟೆಯವರೆಗೆ ಕಛೇರಿಯಲ್ಲಿ ಕಡ್ಡಾಯವಾಗಿ ಇರತಕ್ಕದ್ದು. ಸಂಬಂಧಿಸಿದ ಶಾಖೆಗಳಲ್ಲಿ ಒಬ್ಬ ಪ್ರಥಮ ದರ್ಜೆ ಸಹಾಯಕರನ್ನು ಇರಲು ಸೂಚಿಸಿದೆ. ಮರು ದಿನದ ಕಾರ್ಯಕಲಾಪಗಳ ಪಟ್ಟಿ ಬಂದನಂತರ ಮಾತ್ರ ಸಂಭಂಧಪಟ್ಟ ಸಿಬ್ಬಂಧಿಗಳು ಕಛೇರಿಯನ್ನು ಬಿಡಲು ಸೂಚಿಸಿದೆ. ಹಾಗೂ ಕಛೇರಿ ಬಿಡುವ ಮುನ್ನ ಸಹಾಯಕ ನಿರ್ದೇಶಕರು [ವಿ.ಸ/ವಿ.ಪ] ರವರ ಅನುಮತಿ ಪಡೆಯುವುದು. |
| • | ವಿಧಾನ ಸಭೆ/ಪರಿಷತ್ ಅಧಿವೇಶನ ನಡೆಯುವ ಸಂದರ್ಭದಲ್ಲಿ ಯಾವುದೇ ಪ್ರವಾಸ/ತಪಾಸಣೆಗೆ ಸಿಬ್ಬಂದಿ ವರ್ಗದವರನ್ನು ಕಳುಹಿಸಬಾರದಾಗಿ ಹಾಗೂ ಕಡ್ಡಾಯವೆನಿಸಿದಲ್ಲಿ ಆಯುಕ್ತರ ಅನುಮತಿ ಪಡೆಯುವುದು. |
| • | ವಿಧಾನ ಸಭೆ/ಪರಿಷತ್ ಪ್ರಶ್ನೆಗಳಿಗೆ ಉತ್ತರವನ್ನು ತಯಾರಿಸಿ, ನಾಲ್ಕು ದೃಢೀಕೃತ ಶುದ್ಧ ಪ್ರತಿಗಳನ್ನು ಸಹಾಯಕ ನಿರ್ದೇಶಕರು,ವಿ.ಸ/ವಿ.ಪ ಇವರಿಗೆ ಕಡತದೊಂದಿಗೆ ತ್ವರಿತವಾಗಿ ಕಳುಹಿಸಿಕೊಡಲು ತಿಳಿಸಿದೆ. |

| | |
|---|---|
| • | ವಿಧಾನ ಸಭೆ/ಪರಿಷತ್ತಿನ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು ಇತ್ಯಾದಿ ಬಂದ ತಕ್ಷಣ ಉತ್ತರಗಳನ್ನು ಆ ದಿನವೇ ಕಳುಹಿಸಿಕೊಡಲು ತಿಳಿಸಿದೆ.ಅಪರ ಆಯುಕ್ತರ ಕಛೇರಿ,ಧಾರವಾಡ/ಕಲ್ಬುರ್ಗಿ ಈ ಕಛೇರಿ ವ್ಯಾಪ್ತಿಗೆ ಮಾತ್ರ ಅನ್ವಯಿಸುವ ಪ್ರಶ್ನೆಗಳಿಗೆ ಸಂಬಂಧಿಸಿದವರು ಉತ್ತರಗಳನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿ adpilalccpi@gmail.com ಗೆ ದೃಢೀಕೃತ ಪ್ರತಿಯನ್ನು ಕಳುಹಿಸಲು ತಿಳಿಸಿದೆ. |
| • | ಪ್ರತಿ ಬುಧವಾರ ಮತ್ತು ಶುಕ್ರವಾರ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳು ಕ್ರಮವಾಗಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಬರುತ್ತವೆ. ಇದಕ್ಕೆ ಎರಡು ದಿನಗಳ ಮೊದಲೇ ಉತ್ತರಗಳನ್ನು ಸರ್ಕಾರಕ್ಕೆ ಕಳುಹಿಸುವುದು ಅತ್ಯಾವಶ್ಯಕವಾಗಿದ್ದು, ಅದರಂತೆ ಕ್ರಮ ಕೈಗೊಳ್ಳಲು ತಿಳಿಸಿದೆ. |
| • | ವಿಧಾನ ಸಭೆ/ಪರಿಷತ್ತಿನ ಪ್ರಶ್ನೆಗಳಿಗೆ ಉತ್ತರಗಳನ್ನು ಗಣಕೀಕರಣಗೊಳಿಸಲು ಗಣಕ ಕೇಂದ್ರದಲ್ಲಿ 01 ಕನ್ನಡ 01 ಆಂಗ್ಲ ಬೆರಳಚ್ಚುಗಾರರನ್ನು ಪ್ರತಿ ದಿನವೂ ಸಂಜೆ 5.00 ಗಂಟೆಯಿಂದ 8.30 ಗಂಟೆಯವರೆಗೆ ಶಾಖೆಯಲ್ಲಿರಲು ಸೂಚಿಸಿದೆ. ಹಾಗೂ ದೈನಂದಿನ ಕಾರ್ಯಗಳಲ್ಲಿ ಅಧಿವೇಶನದ ಕಡತಗಳನ್ನು ಆದ್ಯತೆ ಮೇರೆಗೆ ಬೆರಳಚ್ಚು ಮಾಡಲು ಸೂಚಿಸಿದೆ. ಹಾಗೂ ಈ ಬಗ್ಗೆ ಸಂಬಂಧಿಸಿದ ಶಾಖಾಧಿಕಾರಿಗಳು ಸೂಕ್ತಕ್ರಮ ಕೈಗೊಂಡು ವರದಿ ಸಲ್ಲಿಸುವುದು. |
| • | ಶ್ರೀ ಹೆಚ್.ಮಂಜುನಾಥ್ , ಸಹಾಯಕ ನಿರ್ದೇಶಕರು,ವಿ.ಸ/ವಿ.ಪ ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರನ್ನು ವಿಧಾನ ಸಭೆ / ಪರಿಷತ್ತಿನ ಸಂಪರ್ಕಾಧಿಕಾರಿಯನ್ನಾಗಿ ನೇಮಿಸಿದೆ. ಇವರು ದಿನನಿತ್ಯ ಕಾರ್ಯ ಕಲಾಪಗಳನ್ನು ತರಿಸಿ ಅದಕ್ಕೆ ಉತ್ತರಗಳನ್ನು ಸರ್ಕಾರಕ್ಕೆ ಕಳುಹಿಸಿ ಸಭೆಯ ಕಾರ್ಯಕಲಾಪಗಳ ಬಗ್ಗೆ ಆಯುಕ್ತರಿಗೆ ವರದಿ ಮಾಡಲು ಸೂಚಿಸಿದೆ. ***ಇವರ ದೂರವಾಣಿ ಸಂಖ್ಯೆ:080-22112519 ಇ-ಮೇಲ್ ಐಡಿ-*** adpilalccpi@gmail.com |

ಮೇಲ್ಕಂಡ ಎಲ್ಲಾ ವಿಷಯಗಳನ್ನು ಮನದಟ್ಟು ಮಾಡಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಲು ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದೆ. ಈ ನಿರ್ದೇಶನ ವಿಧಾನ ಸಭೆ/ಪರಿಷತ್ ಅಧಿವೇಶನ ನಡೆಯುವ ಕಾಲದಲ್ಲಿ ಮಾತ್ರ ಅನ್ವಯಿಸುತ್ತದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
29/06/18

***ಇವರಿಗೆ:***

*01.* ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

*02.* , ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಮಾನ್ಯ ಶಿಕ್ಷಣ ಸಚಿವರ ಗಮನಕ್ಕೆ ತರಲು ಕೋರಿದೆ.

*03.* ಅಧೀನ ಕಾರ್ಯದರ್ಶಿಗಳು [ಸಾಮಾನ್ಯ] [ಪ್ರಾಥಮಿಕ] [ಪ್ರೌಢ] [ಯೋಜನೆ] ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

*04.* ನಿರ್ದೇಶಕರು, ಪ್ರಾಥಮಿಕ / ಪ್ರೌಢಶಿಕ್ಷಣ / ಅಲ್ಪ ಸಂಖ್ಯಾತ / ಕರ್ನಾಟಕ ಪ್ರೌಢ ಶಿಕ್ಷಣ ಪರಿಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು ಇವರಿಗೆ ಮಹಿತಿಗಾಗಿ.

*05.* ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ, ನಿರ್ದೇಶಕರು ವೃತ್ತಿ ಶಿಕ್ಷಣ ಇವರಿಗೆ ಮಾಹಿತಿಗಾಗಿ.

*06.* ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕ ಸಂಘ, ಹೊಸಕೆರೆಹಳ್ಳಿ, ಬನಶಂಕರಿ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.

*07.* ಅಪರ ಅಯುಕ್ತರು, ಧಾರವಾಡ / ಗುಲ್ಬರ್ಗ.

*08.* ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.

*09.* ಸಹನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳುರು ಇವರಿಗೆ ಮಾಹಿತಿಗಾಗಿ.

*10.* ಸಹನಿರ್ದೇಶಕರುಗಳಿಗೆ / ವಿಭಾಗೀಯ ಸಹ ನಿರ್ದೇಶಕರುಗಳಿಗೆ.

*11.* ರಾಜ್ಯದ ಎಲ್ಲ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಮತ್ತು ಸಿ.ಟಿ.ಇ., ಪ್ರಾಂಶುಪಾಲರಿಗೆ.

12. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
13. ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001.
14. ಆಯುಕ್ತರು / ನಿರ್ದೇಶಕರು / ಅಪರ ನಿರ್ದೇಶಕರು [ಆಡಳಿತ]ಗಳ ಆಪ್ತ ಶಾಖೆಗೆ.
15. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
16. ಆಯುಕ್ತರ ಕಾರ್ಯಾಲಯದ ಎಲ್ಲಾ ಶಾಖಾಧಿಕಾರಿಗಳಿಗೆ/ಅಧೀಕ್ಷಕರುಗಳಿಗೆ.
17. ಕಛೇರಿ ಪ್ರತಿ.

\\10.96.135.22\e\D\LALC\Session-july-2016-1.doc

# ಕರ್ನಾಟಕ ಸರ್ಕಾರ
## (ಸಾರ್ವಜನಿಕ ಶಿಕ್ಷಣ ಇಲಾಖೆ)

ಡಾ. ಎಂ.ಟಿ. ರೇಜು, ಭಾ.ಆ.ಸೇ.
ಆಯುಕ್ತರು.
ಸಾರ್ವಜನಿಕ ಶಿಕ್ಷಣ ಇಲಾಖೆ.

ಹೊಸ ಸಾರ್ವಜನಿಕ ಕಛೇರಿಗಳು,
ನೃಪತುಂಗ ರಸ್ತೆ,
ಬೆಂಗಳೂರು - 560 001
ದೂರವಾಣಿ (ಕ) : 080-22214350
ಫ್ಯಾಕ್ಸ್ : 080-22212137
ಇ-ಮೇಲ್ : cpi.edu.sgkar@kar.nic.in

"ಅಧಿವೇಶನದ ತುರ್ತು"

ಸಂಖ್ಯೆ::ವಿ.ಸ.ಪ01/ ವಿ.ಮಂ.ಅ:03: 2018-19.

ದಿನಾಂಕ:29ನೇ ಜೂನ್ 2018

***ಮಾನ್ಯರೇ,***

**ವಿಷಯ:** ದಿನಾಂಕ:02.07.2018 ರಿಂದ ದಿನಾಂಕ:12.07.2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಸಕಾಲದಲ್ಲಿ ಉತ್ತರ ಕಳುಹಿಸುವ ಬಗ್ಗೆ.

**ಉಲ್ಲೇಖ:** ವಿಧಾನ ಸಭೆ ಕಾರ್ಯದರ್ಶಿಯವರ ಪತ್ರ ಸಂಖ್ಯೆ ಕವಿಸಸ/ಶಾರಶಾ/2018 ದಿನಾಂಕ:27.06.2018.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಅಧಿಸೂಚನೆಯಂತೆ ವಿಧಾನ ಮಂಡಲ ಅಧಿವೇಶನ ದಿನಾಂಕ:02.07.2018 ರಿಂದ ದಿನಾಂಕ:12.07.2018 ರವರೆಗೆ ಬೆಂಗಳೂರಿನಲ್ಲಿ ಜರುಗಲಿದೆ. ಈ ಹಿನ್ನಲೆಯಲ್ಲಿ ಅಧಿವೇಶನದ ಸಮಯದಲ್ಲಿ ಪ್ರಸ್ತಾಪಿತವಾಗುವ ಎಲ್ಲಾ ಪ್ರಶ್ನೆಗಳು ಹಾಗೂ ಗಮನ ಸೆಳೆಯುವ ಸೂಚನೆಗಳಿಗೆ ಸಕಾಲದಲ್ಲಿ ಉತ್ತರವನ್ನು ನೀಡಬೇಕಾಗಿದ್ದು, ಜಿಲ್ಲೆಗಳಿಂದ ಮಾಹಿತಿಯನ್ನು ತ್ವರಿತವಾಗಿ ಪಡೆಯಬೇಕಾಗಿರುತ್ತದೆ.

ಅಧಿವೇಶನದ ಸಮಯದಲ್ಲಿ ಸಂಬಂಧಿಸಿದ ಉಪನಿರ್ದೇಶಕರುಗಳು ಕಛೇರಿಯಲ್ಲಿದ್ದು, ತಮ್ಮ ವ್ಯಾಪ್ತಿಗೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೆ ಹಾಗೂ ಗಮನಸೆಳೆಯುವ ಸೂಚನೆಗಳಿಗೆ ಆಧ್ಯ ಗಮನಹರಿಸಿ ಅತೀ ಜರೂರಾಗಿ ಉತ್ತರ ಸಲ್ಲಿಸಲು ಕ್ರಮ ವಹಿಸಬೇಕಾಗಿ ಸೂಚಿಸಿದೆ.

ತಮ್ಮ ವಿಶ್ವಾಸಿ,

***ಇವರಿಗೆ:***

ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ / ಅಭಿವೃದ್ಧಿ]

ಸಾರ್ವಜನಿಕ ಶಿಕ್ಷಣ ಇಲಾಖೆ,

ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ವಿ.ಸ.ಪ 01/ವಿ.ಮಂ.ಅ: 01:2018-19

ದಿನಾಂಕ:29-06-2018

**: ಜ್ಞಾ ಪ ನ :** **ಅಧಿವೇಶನ ತುರ್ತು**

**ವಿಷಯ**: ವಿಧಾನ ಸಭೆ-ವಿಧಾನ ಪರಿಷತ್ತಿನ ಕಾರ್ಯಕಲಾಪಗಳಿಗೆ ಇಲಾಖಾ ಅಧಿಕಾರಿಗಳನ್ನು ನಿಯೋಜಿಸುವ ಕುರಿತು.

*****

ದಿನಾಂಕ: 02.07.2018 ರಿಂದ 12.07.2018 ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ವಿಧಾನ ಸಭೆ / ಪರಿಷತ್ತಿನ ಅಧಿವೇಶನದ ಕಾರ್ಯಕಲಾಪಗಳಲ್ಲಿ ಇಲಾಖೆಯ ಪರವಾಗಿ ಸದನದಲ್ಲಿ ಪಾಲ್ಗೊಳ್ಳಲು ಈ ಕೆಳಕಂಡ ಅಧಿಕಾರಿಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ದಿನಾಂಕಗಳಂದು ನಿಯೋಜಿಸಿದೆ.

- *ಸಂಬಂಧಪಟ್ಟ ಅಧಿಕಾರಿಗಳು ನಿಯೋಜಿಸಿರುವ ದಿನಾಂಕಗಳಂದು ಸದನ ಪ್ರಾರಂಭವಾಗುವುದಕ್ಕೆ 30 ನಿಮಿಷ ಮುಂಚಿತವಾಗಿ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಕಛೇರಿಯಲ್ಲಿ ವರದಿ ಮಾಡಿಕೊಂಡು ನಂತರ ಸದನದಲ್ಲಿ ಕಡ್ಡಾಯವಾಗಿ ಹಾಜರಿರುವುದು.*
- *ಸದನದ ಕಾರ್ಯಕಲಾಪದ ವೇಳೆಯಲ್ಲಿ, ಪ್ರಶ್ನೋತ್ತರ ಅವಧಿಯಲ್ಲಿ ಇಲಾಖೆಗೆ ಸಂಬಂಧಿಸಿದ ವಿಷಯಗಳ ಪ್ರಸ್ತಾಪ ಆದಲ್ಲಿ ಮತ್ತು ಸಚಿವರ ಭರವಸೆಗಳ ಬಗ್ಗೆ ಪ್ರಸ್ತಾಪ ಆದಲ್ಲಿ ಆ ವಿಚಾರಗಳನ್ನು ಆಯುಕ್ತರಿಗೆ ಹಾಗೂ ಸಂಬಂಧಿಸಿದ ನಿರ್ದೇಶಕರುಗಳಿಗೆ ದೂರವಾಣಿ ಮೂಲಕ ಗಮನಕ್ಕೆ ತರಲು ತಿಳಿಸಿದೆ.*
- *ಸದನದ ಚರ್ಚೆಯ ದಿಕ್ಕನ್ನು ಗಮನಿಸಿ, ಆಯುಕ್ತರ ಹಾಗೂ ಸಂಬಂಧಪಟ್ಟ ನಿರ್ದೇಶಕರ ಉಪಸ್ಥಿತಿಯ ಅಗತ್ಯವಿದ್ದರೆ ಕೂಡಲೇ ಅವರಿಗೆ ಹಾಜರಾಗಲು ದೂರವಾಣಿ ಮೂಲಕ ಮಾಹಿತಿಯನ್ನು ನೀಡುವುದು.*
- *ಇಲಾಖೆಯ ಪ್ರಶ್ನೋತ್ತರ ಅವಧಿ ಹೊರತುಪಡಿಸಿ ಇತರೆ ಎಲ್ಲಾ ಅವಧಿಯಲ್ಲಿ [ಗಮನ ಸೆಳೆಯುವ ಸೂಚನೆ, ಶೂನ್ಯ ವೇಳೆ ಪ್ರಸ್ತಾಪ ಹಾಗೂ ಇನ್ನಿತರೆ ನಿಯಮಗಳಡಿಯಲ್ಲಿ ಪ್ರಸ್ತಾಪ] ಸದನದಲ್ಲಿ ಪ್ರಸ್ತಾಪವಾಗುವ ಇಲಾಖೆಯ ಅಂಶಗಳನ್ನು ಕೂಡಲೇ ಈ ಕಛೇರಿಗೆ ವರದಿ ಮಾಡುವುದು.*
- *ದಿನದ ಅಂತ್ಯದಲ್ಲಿ ಸದನದಲ್ಲಿ ಚರ್ಚಿಸಲಾಗುವ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಚಾರಗಳ ವಿವರಗಳನ್ನು ಕ್ರೋಢೀಕರಿಸಿಕೊಂಡು ಒಂದು ಲಿಖಿತ ವರದಿಯನ್ನು ಸಿದ್ಧಪಡಿಸಿಕೊಂಡು ಮರು ದಿವಸವೇ ಆಯುಕ್ತರಿಗೆ ಹಾಗೂ ನಿರ್ದೇಶಕರುಗಳಿಗೆ ಸಲ್ಲಿಸಲು ತಿಳಿಸಿದೆ.*

| ಕ್ರ. ಸಂ | ಅಧಿಕಾರಿಗಳ ಹೆಸರು ಮತ್ತು ಪದನಾಮ ಶ್ರೀ/ಶ್ರೀಮತಿ | ವಿಧಾನ ಸಭೆ | ವಿಧಾನ ಪರಿಷತ್ |
|---|---|---|---|
| 1. | ಸಿದ್ಧಮ್ಮ, ಹಿ.ಸ.ನಿ. ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು | 02.07.2018 | ಜಂಟಿ ಕಲಾಪ. |
| 2. | ಶುಭಮಂಗಳ ಆರ್.ಎನ್, ಹಿ.ಸ.ನಿ. ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು | | 03.07.2018 |
| 3. | ಶೈಲಜಾ ಕುಮಾರಿ, ಹಿ.ಸ.ನಿ. ಕ.ಪ.ಮು.ಸಂಘ(ನೋಂ),ಬೆಂಗಳೂರು. | 03.07.2018 | |
| 4. | ಎಸ್ ಆರ್ ಚಂದ್ರಯ್ಯ,ಹಿ.ಸ.ನಿ ಮ.ಉ.ಯೋ. ಕೆ.ಜಿ. ರಸ್ತೆ,ಬೆಂಗಳೂರು | | 04.07.2018 |
| 5. | ವಿಮಲಾ ಕೆ.ಎನ್, ಹಿ.ಸ.ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು. | 04.07.2018 | |
| 6. | ಮತೀಗೌಡ, ಹಿ.ಸ.ನಿ. ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು | | 05.07.2018 |
| 7. | ಬಲರಾಮ .ಎನ್ ಹಿ.ಸ.ನಿ. ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು | 05.07.2018 | |
| 8. | ವಹಿದಾ ನಸ್ರೀನ್ ಎಂ, ಹಿ.ಸ.ನಿ. ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು | | 06.07.2018 |
| 9. | ವಿಜಯಲಕ್ಷ್ಮಮ್ಮ ಹೆಚ್.ಎಸ್, ಹಿ.ಸ.ನಿ. ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು | 06.07.2018 | |
| 10. | ಉಮಾ ದೇವಿ ಎಸ್ ಸಿ , ಹಿ.ಸ.ನಿ. ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು | 09.07.2018 | |

| | | | |
|---|---|---|---|
| 11. | ಭಾರತಿ, ಹಿ.ಸ.ನಿ. ಕ.ಪ.ಪು.ಸಂಘ(ನೋಂ),ಬೆಂಗಳೂರು. | | 09.07.2018 |
| 11. | ಜಯಕುಮಾರ್, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ. ಬೆಂಗಳೂರು | 10.07.2018 | |
| 12. | ಸಿದ್ಧಮ್ಮ, ಹಿ.ಸ.ನಿ. ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು | | 10.07.2018 |
| 13. | ಬೈಲಾಂಜನಪ್ಪ, ಹಿ.ಸ.ನಿ. ಡಿ.ಎಸ್.ಇ.ಆರ್.ಟಿ. ಬೆಂಗಳೂರು | 11.07.2018 | |
| 14. | ಶ್ರೀನಿವಾಸ, ಹಿ.ಸ.ನಿ. ಕ.ಪ.ಪು.ಸಂಘ(ನೋಂ),ಬೆಂಗಳೂರು. | | 11.07.2018 |
| 15. | ಮಂಜುನಾಥ ಆರ್ , ಹಿ.ಸ.ನಿ. ಡಿ.ಎಸ್.ಇ.ಆರ್.ಟಿ. ಬೆಂಗಳೂರು | 12.07.2018 | |
| 16. | ವಿನುತಾ ಡಿ. ಎಸ್ ಹಿ.ಸ.ನಿ. ಡಿ.ಎಸ್.ಇ.ಆರ್.ಟಿ. ಬೆಂಗಳೂರು | | 12.07.2018 |

***ಸಹಾಯಕ ನಿರ್ದೇಶಕರು [ವಿಧಾನ ಸಭೆ / ಪರಿಷತ್] ಆಯುಕ್ತರ ಕಛೇರಿ, ಇವರಿಂದ ಪಾಸ್ ಪಡೆದು ದಿನದ ಕಲಾಪ ಮುಗಿದ ನಂತರ ಪಾಸ್‌ನ್ನು ಕಡ್ಡಾಯವಾಗಿ ಆ ದಿನವೇ ಹಿಂದಿರುಗಿಸಲು ಸೂಚಿಸಿದೆ.***

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

***ಇವರಿಗೆ,***

*01.* ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
*02.* ಆಪ್ತ ಕಾರ್ಯದರ್ಶಿಗಳು, ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು, ಇವರಿಗೆ ಮಾಹಿತಿಗಾಗಿ ನೀಡುತ್ತಾ, ದಯವಿಟ್ಟು ಮಾನ್ಯ ಸಚಿವರ ಆಧ್ಯ ಗಮನಕ್ಕೆ ತರಲು ಕೋರಿದೆ.
*03.* ಸಂಬಂದಪಟ್ಟ ಎಲ್ಲಾ ಅಧಿಕಾರಿಗಳಿಗೆ.
*04.* ನಿರ್ದೇಶಕರು, ಡಿಎಸ್.ಇ.ಆರ್.ಟಿ., ಹೊಸಕೆರೆಹಳ್ಳಿ, ಬನಶಂಕರಿ, ಬೆಂಗಳೂರು.
*05.* ವ್ಯವಸ್ಥಾಪಕ ನಿರ್ದೇಶಕರು, ಪಠ್ಯಪುಸ್ತಕ ಸಂಘ, ಹೊಸಕೆರೆಹಳ್ಳಿ, ಬನಶಂಕರಿ, ಬೆಂಗಳೂರು.
*06.* ನಿರ್ದೇಶಕರು ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಶಾಲೆಗಳು, ಇವರಿಗೆ ಮಾಹಿತಿಗಾಗಿ.
*07.* ಮಾನ್ಯ ಆಯುಕ್ತರ ಆಪ್ತಶಾಖೆಗೆ ಮಾಹಿತಿಗಾಗಿ.
*08.* ನಿರ್ದೇಶಕರು, ಪ್ರಾಥಮಿಕ/ಪ್ರೌಢಶಿಕ್ಷಣ/ಕ.ಪ್ರೌ.ಶಿ.ಪ.ಮಂ ಇವರಿಗೆ ಮಾಹಿತಿಗಾಗಿ.
*09.* ರಾಜ್ಯ ಯೋಜನ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ಇವರಿಗೆ ಮಾಹಿತಿಗಾಗಿ.
*10.* ಜಂಟಿ ಆಯುಕ್ತರು [ಆಡಳಿತ] ಇವರಿಗೆ ಮಾಹಿತಿಗಾಗಿ.\
*11.* ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ
*12.* ಕಛೇರಿಯ ಎಲ್ಲಾ ಶಾಖಾಧಿಕಾರಿಗಳಿಗೆ.
*13.* ಇ-ಆಡಳಿತ ಶಾಖೆಗೆ ನೀಡುತ್ತಾ ಇಲಾಖಾ ವೆಬ್ ಸೈಟ್ ಗೆ ಅಪ್‌ಲೋಡ್ ಮಾಡಲು ತಿಳಿಸಿದೆ.
*14.* ಕಛೇರಿ ಪ್ರತಿ.